# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1077 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಸ್. ಕೇಶವ ಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 18-12-2024 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಮೇಲುಕೋಟೆ ಹೋಬಳಿ, ಕಾಡೇನಹಳ್ಳಿ ಗ್ರಾಮಕ್ಕೆ ಸೇರಿರುವ ಹೊನ್ನಿಗುಡಿ ಬಾರೆಯ ಎಷ್ಟು ಎಕರೆ ಸರ್ಕಾರಿ ಜಮೀನನ್ನು ಅಳತೆ ಮಾಡಲಾಗಿದೆ; ಮಾಡದಿದ್ದಲ್ಲಿ, ಕಾರಣವೇನು; ಯಾವಾಗ ಅಳತೆ ಮಾಡಲಾಗುವುದು; (ಅಳತೆ ಮಾಡಿದ್ದಲ್ಲಿ ಸದರಿ ಪ್ರತಿಯನ್ನು ನೀಡುವುದು) | ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಮೇಲುಕೋಟೆ ಹೋಬಳಿ, ಕಾಡೇನಹಳ್ಳಿ ಗ್ರಾಮದ ಹೊನ್ನಿಗುಡಿ ಬಾರೆ (ರೂಢಿಗತ ಹೆಸರು) ಜಮೀನು ಮೂಲತಃ ಸರ್ಕಾರಿ ಗೋಮಾಳದ ಜಮೀನಾಗಿದ್ದು ಹಾಲಿ ಪಹಣಿಯಂತೆ 62 ಎಕರೆ 10 ಗುಂಟೆ ಜಮೀನಿರುತ್ತದೆ. ಸದರಿ ಜಮೀನನ್ನು ಅಳತೆ ಮಾಡಿರುವುದಿಲ್ಲ.<br><br>ಸರ್ಕಾರದ ಆದೇಶ ಸಂಖ್ಯೆ:ಕಂಇ 156 ಎಸ್‌ಎಸ್‌ಎಂ 2024, ದಿನಾಂಕ:25-11-2024 ರನ್ವಯ ದರಖಾಸ್ತು ಜಮೀನಿನ ದುರಸ್ತಿ ಮಾಡುವ ಬಗ್ಗೆ ಕ್ರಮವಹಿಸಲಾಗುತ್ತಿದ್ದು, ದುರಸ್ತಿ ಸಮಯದಲ್ಲಿ ನಿಯಮಾನುಸಾರ ಅಳತೆ ಮಾಡಲು ಕ್ರಮವಹಿಸಲಾಗುತ್ತದೆ. |
| ಆ) | ಹೊನ್ನಿಗುಡಿ ಬಾರೆಯು ಸರ್ಕಾರಿ ಜಮೀನಾಗಿದ್ದು, ಸದರಿ ಜಮೀನನ್ನು ಅಕ್ರಮವಾಗಿ ಅಕ್ಕ ಪಕ್ಕದವರು ಒತ್ತುವರಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಜಮೀನನ್ನು ಒತ್ತುವರಿ ಮಾಡಿರುವವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ಮಾಹಿತಿಯನ್ನು ನೀಡುವುದು) | ಬಂದಿದೆ.<br><br>ಒತ್ತುವರಿ ಮಾಡಿಕೊಂಡಿರುವ ರೈತರು ಸಕ್ರಮಾತಿ ಕೋರಿ ನಮೂನೆ-53 ಮತ್ತು 57 ರಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಸಂಬಂಧ ಸಕ್ರಮಾತಿ ಸಮಿತಿಯಲ್ಲಿ ತೀರ್ಮಾನವಾದ ನಂತರ ನಿಯಮಾನುಸಾರ ಒತ್ತುವರಿ ತೆರವುಗೊಳಿಸಲು ಕ್ರಮ ವಹಿಸಲಾಗುತ್ತದೆ. |
| ಇ) | ಸದರಿ ಹೊನ್ನಿಗುಡಿ ಬಾರೆಯ ಜಮೀನನ್ನು ಸ್ಥಳೀಯರಾದ ಸ್ವಾಮಿಗೌಡ ಮತ್ತು ಪುಟ್ಟೇಗೌಡ ಇವರುಗಳು ಅಕ್ರಮವಾಗಿ ಒತ್ತುವರಿ ಮಾಡಿ ಆ ಸ್ಥಳದಲ್ಲಿ ಮನೆ ನಿರ್ಮಾಣ ಮಾಡಿರುವುದು ನಿಜವೇ, ಹಾಗಿದ್ದಲ್ಲಿ ಸದರಿಯವರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುವುದು; (ಸಂಪೂರ್ಣ ಮಾಹಿತಿಯನ್ನು ನೀಡುವುದು) | ಬಂದಿದೆ.<br><br>ಒತ್ತುವರಿ ಮಾಡಿಕೊಂಡಿರುವ ಜಮೀನಿನಲ್ಲಿ ವಾಸದ ಮನೆಯನ್ನು ನಿರ್ಮಿಸಿಕೊಂಡಿದ್ದು, ಸದರಿ ಜಮೀನನ್ನು ಒಳಗೊಂಡಂತೆ ಸ್ವಾಮಿಗೌಡ ಮತ್ತು ಪುಟ್ಟೇಗೌಡ ರವರು ನಮೂನೆ-57 ರಲ್ಲಿ ಸಕ್ರಮಾತಿ ಕೋರಿ ಅರ್ಜಿ ಸಲ್ಲಿಸಿದ್ದು, ಸಕ್ರಮಾತಿ ಸಮಿತಿಯನ್ನು ಅರ್ಜಿಗಳ ವಿಲೇವಾರಿ ನಂತರ ಒತ್ತುವರಿ ತೆರವುಗೊಳಿಸಲು ನಿಯಮಾನುಸಾರ ಕ್ರಮ ವಹಿಸಲಾಗುತ್ತದೆ. |
| ಈ) | ಹೊನ್ನಿಗುಡಿ ಬಾರೆಯ ಸುತ್ತಳತೆಯಲ್ಲಿ ಒಟ್ಟು ಎಷ್ಟು ಆಲದ ಮರಗಳಿವೆ; (ಸಂಪೂರ್ಣ ಮಾಹಿತಿ ನೀಡುವುದು) | ಹೊನ್ನಿಗುಡಿ ಬಾರೆಯ ಸುತ್ತಳತೆಯಲ್ಲಿ ಒಟ್ಟು 25 ಮರಗಳಿದ್ದು, ಇಂತಹ ಯಾವುದೇ ಪ್ರಕರಣಗಳು ಕಂಡು ಬಂದಿರುವುದಿಲ್ಲ. |

| | | |
|---|---|---|
| | ಅಕ್ರಮವಾಗಿ ಮರಗಳನ್ನು ಕಡಿದು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | |
| ಉ) | ಹೂನ್ನಿಗುಡಿ ಬಾರೆಯನ್ನು ಸುತ್ತಳತೆ ಮಾಡಿ ಅಕ್ರಮವಾಗಿ ಒತ್ತುವರಿ ಮಾಡಿರುವವರಿಂದ ತೆರವುಗೊಳಿಸಲು ಎಷ್ಟು ಕಾಲಾವಕಾಶವನ್ನು ನೀಡಲಾಗಿರುತ್ತದೆ; ಸದರಿ ಜಮೀನಿಗೆ ರೈತರು ಒತ್ತುವರಿ ಮಾಡದ ಹಾಗೇ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದೇ? (ಸಂಪೂರ್ಣ ಮಾಹಿತಿ ನೀಡುವುದು) | ಸದರಿ ಜಮೀನಿನಲ್ಲಿ ಒತ್ತುವರಿ ಮಾಡಿಕೊಂಡಿರುವ ರೈತರು ಸಕ್ರಮಾತಿ ಕೋರಿ ಒಟ್ಟು 38 ಅರ್ಜಿಗಳು ಸಲ್ಲಿಕೆಯಾಗಿದ್ದು, ಸಕ್ರಮಾತಿ ಸಮಿತಿಯಲ್ಲಿ ಅರ್ಜಿಗಳ ವಿಲೇವಾರಿಯಾದ ನಂತರ ನಿಯಮಾನುಸಾರ ಕ್ರಮ ವಹಿಸಲಾಗುತ್ತಿದೆ. |

ಸಂಖ್ಯೆ: ಕಂಇ 210 ಎಸ್‌ಎಸ್‌ಸಿ 2024

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು